ಸಲುವಾಗಿ ವಿಷಯವನ್ನು ಸಚಿವ ಸಂಪುಟಕ್ಕೆ ಒಪ್ಪಿಸಿತು. ದಿನಾಂಕ 15–12–1981 ರಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿಷಯ ಮಂಡಿತವಾಗಿದ್ದು ಸಚಿವ ಸಂಪುಟವು ಈ ಪ್ರಕರಣದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳ ಅಭಿಪ್ರಾಯ ಲಾಭ ಪಡೆದ ನಂತರ ತನ್ನ ಮುಂದಿನ ಸಭೆಯಲ್ಲಿ ಪರಿಶೀಲಿಸಬೇಕಾಗಿ ನಿರ್ಣಯಿಸಿತು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಅಭಿಪ್ರಾಯವನ್ನು ಪಡೆದ ನಂತರ ವಿಷಯ ಪುನಃ ಸಚಿವ ಸಂಪುಟ ಸಭೆಯಲ್ಲಿ ಮಂಡಿತವಾಯಿತು. ದಿನಾಂಕ 25–8–1982 ರಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಸದರಿ ವಿಷಯದಲ್ಲಿ ತೀರ್ಮಾನ ಕೈಗೊಳ್ಳುವುದನ್ನು ಅಕ್ಟೋಬರ್ ತಿಂಗಳ ಅಂತ್ಯದವರೆಗೆ ಮುಂದೂಡುವಂತೆ ನಿರ್ಣಯಿಸಿತು. ಅದೇ ರೀತಿ ಪುನಃ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ದಿನಾಂಕ 13–11–1982 ರಲ್ಲಿನ ಸಭೆಯಲ್ಲಿಈ ಬಗ್ಗೆ ತೀರ್ಮಾನ ಕೈಗೊಳ್ಳುವುದನ್ನು ಡಿಸೆಂಬರ್ 1982 ರ ಅಂತ್ಯದ ವರೆಗೂ ಮುಂದೂಡುವಂತೆ ನಿರ್ಧರಿಸಿತು.

ಪ ಸ್ತುತ ಸರ್ಕಾರವು ದಿನಾಂಕ 4–3–1983 ರಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ವಿಷಯ ಮಂಡಿಸಲಾಗಿದ್ದು ಜಾಗೃತ ಆಯೋಗ ವಿಚಾರಣೆ ಮಾಡಿದ ಅನೇಕ ವಿಚಾರಣಾ ಪ್ರಕರಣಗಳಲ್ಲಿ ಸರ್ಕಾರಿ ನೌಕರರಿಗೆ ಶಿಕ್ಷೆ ವಿಧಿಸುವುದರ ಬಗ್ಗೆ ಜಾಗೃತ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಕೊಳ್ಳದೇ ಇರುವುದನ್ನು ಗಮನಿಸಿ (ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ) ಇಂತಹ ಪ್ರಕರಣಗಳನ್ನು ಪರಿಶೀಲಿಸುವ ಬಗ್ಗೆ ಎಂದರೆ ಒಂದೊಂದು ಪ್ರಕರಣದಲ್ಲಿ ಒಂದೊಂದು ನಿರ್ಣಯ ತೆಗೆದುಕೊಳ್ಳುವ ಬದಲು ತತ್ಸಂಬಂಧವಾದ ಪ್ರಕರಣಗಳಲ್ಲಿ ಏಕರೀತಿಯ ನಿರ್ಣಯ ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಿತು. ಹಾಗೂ ಹಾಲಿ ಪ್ರಕರಣವನ್ನು, ಮೇಲೆ ಹೇಳುವ ಪ್ರಕರಣಗಳನ್ನು ಸಚಿವ ಸಂಪುಟವು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಸಭೆಯ ಮುಂದೆ ತರುವಂತೆ ನಿರ್ಣಯ ತೆಗೆದುಕೊಂಡಿತು.

(ಇ) ಅಂತಹ ಸಂಗತಿಗಳು ಸರ್ಕಾರದ ಗಮನಕ್ಕೆ ಬಂದಿಲ್ಲ

ವಿಷಯ : ರಾಜ್ಯ ಸರ್ಕಾರದಿಂದ ನಡೆಯುತ್ತಿರುವ ಕಾರ್ಖಾನೆಗಳು.

ಪ್ರ. 137 (103) ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೇ :—

(ಅ) ರಾಜ್ಯ ಸರ್ಕಾರದಿಂದ ನಡೆಯುವ ಕಾರ್ಖಾನೆಗಳ ಸಂಖ್ಯೆ ಎಷ್ಟು; ಇವುಗಳ ಹೆಸರು, ಲಾಭ ಹಾಗೂ ಹಾನಿಗಳ ವಿವರಗಳನ್ನು 1980 ನೇ ಸಾಲಿನಿಂದ 1982 ರವರೆಗೆ ಮಾಹಿತಿ ಒದಗಿಸುವುದು;

(ಆ) ಮೇಲ್ಕಂಡ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ವಿದೇಶಗಳಿಗೆ ಹೋಗಿ ಬಂದವರ ಸಂಖ್ಯೆ ಎಷ್ಟು ಹಾಗೂ ಯಾವ ದೇಶಗಳಿಗೆ ಹಾಗೂ ಅವರು ಮಾಡಿದ ವೆಚ್ಚ ಎಷ್ಟು;

(ಇ) ಮೇಲ್ಕಂಡ ಕಾರ್ಖಾನೆಗಳಿಂದ ಲಾಭಗಳಿಸಿದ ಘಟಕಗಳಿಂದ ಹೋದವರ ಸಂಖ್ಯೆ ಹಾಗೂ ವೆಚ್ಚದ ಮೊತ್ತ ಎಷ್ಟು;

(ಈ) ಹಾನಿಗೊಳಗಾದ ಘಟಕಗಳಿಂದ ಹೋಗಿ ಬಂದವರ ಸಂಖ್ಯೆ ಎಷ್ಟು ಮತ್ತು ವೆಚ್ಚ ಮಾಡಿದ ಹಣವೆಷ್ಟು ; 1980 ರಿಂದ 1982 ರವರೆಗೆ ಮಾಹಿತಿ ಒದಗಿಸುವುದು;

(ಉ) ವಿದೇಶಗಳಿಗೆ ಹೋಗಿ ಬಂದ ಅಧಿಕಾರಿಗಳು ಆಕ್ರಮವಾಗಿ ತಂದ ಸಾಮಾನು ಸಿಕ್ಕಿಕೊಂಡ ಪ್ರಕರಣಗಳು ಎಷ್ಟು, ಹಾಗೂ ಅದರ ಮೌಲ್ಯ ಎಷ್ಟು ?

ವಿಷಯ : ಅರಣ್ಯ ಸಂಪತ್ತನ್ನು ಕಾಪಾಡುವ ಬಗ್ಗೆ.

ಪ್ರ. 138 (161) ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಮೈಸೂರು, ಕೊಳ್ಳೇಗಾಲ, ಚಾಮರಾಜನಗರ, ಮಂಡ್ಯ, ಬಂಡಿಪುರ, ಕೊಡಗು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಅರಣ್ಯಗಳಲ್ಲಿರುವ ಹಿಂಸೆ ಪ್ರಾಣಿಗಳ ಅಂದರೆ, ಆನೆ, ಕಾಡುಕೋಣ, ಹುಲಿ, ಹಾವುಗಳ ಸಂಖ್ಯೆ ಎಷ್ಟು ? (ಕಳೆದ ಎರಡು ವರ್ಷಗಳ ಬಗ್ಗೆ ಮಾಹಿತಿ ನೀಡುವುದು).

(ಆ) ಮೇಲ್ಕಂಡ ಅರಣ್ಯಗಳಲ್ಲಿ ಆನೆಗಳನ್ನು ಕೊಂದು ದಂತಗಳನ್ನು ಒಯ್ದು ಪ್ರಕರಣಗಳ ಸಂಖ್ಯೆ ಎಷ್ಟು ? (ಎರಡು ವರ್ಷಗಳ ಮಾಹಿತಿ ಒದಗಿಸುವುದು).

(ಇ) ಇತ್ತೀಚೆಗೆ 6 ತಿಂಗಳ ಒಳಗಾಗಿ ಆನೆಗಳ ಸಂಖ್ಯೆ ಹೆಚ್ಚಾಗಿರುವುದು ನಿಜವೇ ? ಹೆಚ್ಚಾಗಿದ್ದರೆ ಕಾರಣಗಳೇನು ;

(ಈ) ಆಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ತಪ್ಪಿಸುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜೀವಿಜಯ (ರಾಜ್ಯ ಅರಣ್ಯ ಮಂತ್ರಿಗಳು).—

(ಅ) ಏಪ್ರಿಲ್ 29 ಮತ್ತು 30, 1983 ರಲ್ಲಿ ಆನೆ ಮತ್ತು ಕಾಡುಕೋಣಗಳ ಗಣತಿಯ ಪ್ರಕಾರ ಅವುಗಳ ಸಂಖ್ಯೆ ಬೇರೆ ಬೇರೆ ಅರಣ್ಯಗಳಲ್ಲಿ ಈ ಕೆಳಗೆ ನಮೂದಿಸಿದಂತೆ ಇರುತ್ತದೆ:

	ಆನೆ	ಕಾಡುಕೋಣ
(1) ಮೈಸೂರು	136	80
(2) ಕೊಳ್ಳೇಗಾಲ	426	38
(3) ಚಾಮರಾಜನಗರ	691	293
(4) ಮಂಡ್ಯ	119	—
(5) ಬಂಡೀಪುರ	1024	370
(6) ಕೊಡಗು	900	453
(7) ಶಿವಮೊಗ್ಗ	184	3151
(8) ಉತ್ತರ ಕನ್ನಡ	37	706
(9) ಬೆಂಗಳೂರು	58	—
(10) ಬೆಳಗಾವಿ	4	—
ಒಟ್ಟು	3579	5091

ಇತ್ತೀಚಿನ ಗಣತಿಯ ಪ್ರಕಾರ ಬಂಡೀಪುರ ಅರಣ್ಯದಲ್ಲಿ ಹುಲಿಗಳ ಸಂಖ್ಯೆ 49 ಇರುವುದು ಉಳಿದ ಸ್ಥಳಗಳಲ್ಲಿ ಹುಲಿಗಳ ಗಣತಿ ಆಗಿರುವುದಿಲ್ಲ. ಹಾವುಗಳ ಗಣತಿ ಮಾಡಲಾಗುವುದಿಲ್ಲ.

(ಆ) ಮೇಲ್ಕಂಡ ಅರಣ್ಯಗಳಲ್ಲಿ ಆನೆಗಳನ್ನು ಕೊಂದು ದಂತಗಳನ್ನು ಒಯ್ದ ಪ್ರಕರಣಗಳ ಸಂಖ್ಯೆ ಇದುವರೆಗೆ ಬಂದಿರುವ ವರದಿ ಪ್ರಕಾರ ಈ ಕೆಳಕಂಡಂತಿವೆ:

ಸ್ಥಳ	1981–82	1982–83
(1) ಮೈಸೂರು	2	—
(2) ಕೊಳ್ಳೇಗಾಲ	5	3
(3) ಚಾಮರಾಜನಗರ	—	1
(4) ಮಂಡ್ಯ	3	2
(5) ಬಂಡೀಪುರ	—	—
(6) ಕೊಡಗು	—	1
(7) ಉತ್ತರ ಕನ್ನಡ	—	—
(8) ಬೆಂಗಳೂರು	—	—
(9) ಬೆಳಗಾವಿ	—	—
ಒಟ್ಟು:	10	7

(ಇ) ಇತ್ತೀಚೆಗೆ ಅಂದರೆ, ಜನವರಿ ತಿಂಗಳ ಈಚೆಗೆ ಆನೆಗಳ ಸಂಖ್ಯೆ ಕರ್ನಾಟಕ ಅರಣ್ಯ ಪ್ರದೇಶಗಳ ಹೆಚ್ಚಾಗಿರುವುದು ನಿಜ. ಪಕ್ಕದ ತಮಿಳುನಾಡಿನ ಪ್ರದೇಶದಲ್ಲಿ ಬರಗಾಲ ಪರಿಸ್ಥಿತಿ ಉಂಟಾಗಿದೆ. ಬಹಳ ದಿವಸಗಳಿಂದಲೂ ಮಳೆ ಬಾರದೆ ಅಲ್ಲಿನ ಎಲ್ಲಾ ಕೆರೆ ನದಿಗಳಲ್ಲಿ ನೀರಿಲ್ಲದೆ ಬತ್ತಿ ಹೋಗಿರುವ ಕಾರಣ ಅಲ್ಲಿ ಅರಣ್ಯ ಪ್ರದೇಶದ ಆನೆಗಳಿಗೆ ಕುಡಿಯಲು ನೀರು ಸಾಲದೆ ಕರ್ನಾಟಕ ಅರಣ್ಯ ಪ್ರದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದಿವೆ.

(ಈ) (1) ಅಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ತಡೆಗಟ್ಟಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಸರ್ಕಾರವು ಈ ಕೆಳಗೆ ನಮೂದಿಸಿರುವಂತಹ ಕಾಯ್ದೆ ಮತ್ತು ನಿಯಮಗಳವ್ಯಾಪ್ತಿಯೊಳಗೆ ಅಧಿಕಾರವನ್ನು ನೀಡಲಾಗಿದೆ.

(ಅ) ಕರ್ನಾಟಕ ಅರಣ್ಯ ಕಾಯ್ದೆ, 1963 ಮತ್ತು ಕರ್ನಾಟಕ ಅರಣ್ಯ ನಿಯಮಗಳು, 1969.

(ಆ) ಕರ್ನಾಟಕ ಮರಗಳ ಸಂರಕ್ಷಣೆ ಕಾಯ್ದೆ, 1976. ಮತ್ತು

(ಇ) ವನ್ಯ ಪ್ರಾಣಿಗಳ ಸಂರಕ್ಷಣಾ ಕಾಯ್ದೆ 1972 ಮತ್ತು ನಿಯಮಗಳು 1973. ಅರಣ್ಯ ಇಲಾಖೆಯ ಅಧಿಕೃತ ಅಧಿಕಾರಿಗಳಿಗೆ ಕಳ್ಳ ಸಾಗಾಣಿಕೆಯಲ್ಲಿ ಸಿಕ್ಕ ಅರಣ್ಯ ಉತ್ಪನ್ನ ಮತ್ತು ಕಳ್ಳ ಸಾಗಾಣಿಕೆಯಲ್ಲಿ ಬಳಸಿದಂತಹ ವಾಹನಗಳು, ಪ್ರಾಣಿಗಳು ಹಾಗೂ ಉಪಕರಣ ಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲು ಕರ್ನಾಟಕ ಅರಣ್ಯ ಕಾಯ್ದೆಯ 71 ಎ ಕಲುಮಿನ ಪ್ರಕಾರ ಅಧಿಕಾರ ನೀಡಲಾಗಿದೆ.

ಅನಧಿಕೃತವಾಗಿ ಅರಣ್ಯದಲ್ಲಿ ಜಾಗವನ್ನು ಆಕ್ರಮಿಸಿಕೊಂಡಂಥವರನ್ನು ಅಂತಹ ಜಾಗ ದಿಂದ ಉಚ್ಚಾಟಿಸಲು ಕರ್ನಾಟಕ ಅರಣ್ಯ ಕಾಯ್ದೆಯ 64 ಎ ಕಲುಮಿನೊಳಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ.

ಶ್ರೀಗಂಧದ ಕಳ್ಳ ಸಾಗಾಣಿಕೆಯಲ್ಲಿ ಸಿಕ್ಕಿಕೊಂಡಂತಹ ಅಪರಾಧಿಗಳನ್ನು ನ್ಯಾಯಾಲಯದ ಮೊರೆಹೊಕ್ಕು ಶಿಕ್ಷಿಸಲು ಅಧಿಕಾರಿಗಳಿಗೆ ಅವಕಾಶವಿದೆ. ಕರ್ನಾಟಕ ಅರಣ್ಯ ಕಾಯ್ದೆಯ 86 ನೇ ಕಲುಮಿನ ಪ್ರಕಾರ ಅಪರಾಧಿಗಳಿಗೆ ಮೂರು ವರ್ಷಕ್ಕೆ ಕಡಿಮೆಯಿಲ್ಲದ ಜೈಲುವಾಸದೊಂದಿಗೆ ಹತ್ತು ಸಾವಿರ ರೂಪಾಯಿ ದಂಡ (ಮೊದಲ ಬಾರಿ ಸಿಕ್ಕಂತಹ ಅಪರಾಧಿಗಳಿಗೆ) ಮತ್ತು ಐದು ವರ್ಷಕ್ಕೆ ಕಡಿಮೆಯಿಲ್ಲದ ಜೈಲುವಾಸದೊಂದಿಗೆ ಇಪ್ಪತ್ತು ಸಾವಿರ ರೂಪಾಯಿ ದಂಡ (ಎರಡನೇ ಬಾರಿ ಮತ್ತೆ ಮೇಲೆ ಸಿಕ್ಕಿಕೊಂಡಂತಹ ಅಪರಾಧಿಗಳಿಗೆ) ಶಿಕ್ಷೆ ವಿಧಿಸಲು ಅವಕಾಶವಿದೆ.

(2) ಪ್ರಸ್ತುತ ಅರಣ್ಯ ಸಿಬ್ಬಂದಿಯ ಹೊರತು ನಮ್ಮ ರಾಜ್ಯದಲ್ಲಿ ಅರಣ್ಯ ಇಲಾಖೆಯ ಒಟ್ಟು ಹದಿನೆಂಟು ಅರಣ್ಯ ಸಂಚಾರಿ ದಳಗಳು ಕೆಲಸ ಮಾಡುತ್ತಿವೆ. ಈ ಸಂಚಾರಿ ದಳಗಳ ಮುಖ್ಯ ಕಾರ್ಯ ಅರಣ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಕಳ್ಳ ಸಾಗಾಣಿಕೆದಾರರನು ಕಾನೂನಿನ ರೀತ್ಯ ಸದೆಬಡಿಯುವುದು.

(3) ಅಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ದಕ್ಷತೆಯಿಂದ ತಡೆಗಟ್ಟಲು ಇಲಾಖೆಯು ತನ್ನ ಸಿಬ್ಬಂದಿಗೆ ಒಟ್ಟು ಎರಡುನೂರು ಬಂದೂಕುಗಳನ್ನು ಮತ್ತು ಆರವತ್ತಾರು ವೈರ್‌ಲೆಸ್ ಸೆಟ್‌ಗಳನ್ನು ಕೊಡಲಾಗಿದೆ.

ಮೇಲೆ ಕಾಣಿಸಿದ ಪ್ರಕಾರ ಅಕ್ರಮ ಸಾಗಾಣಿಕೆದಾರರು ಅರಣ್ಯಗಳಲ್ಲಿ ಗಂಡಾನೆಗಳನ್ನು ಕೊಂದು ಅದರ ದಂತಗಳನ್ನು ಸಾಗಿಸುತ್ತಿರುವುದು ಹೆಚ್ಚಾಗಿದೆ. ಈ ಕಾರ್ಯಕ್ರಮವನ್ನು ತಡೆ ಗಟ್ಟಲು ಅರಣ್ಯ ಇಲಾಖೆಯು ಕೆಲವು ಕ್ರಮಗಳನ್ನು ತೆಗೆದುಕೊಂಡಾಗ್ಯೂ ಸಾಕಷ್ಟು ಸಿಬ್ಬಂದಿ ಇಲ್ಲದ ಕಾರಣ ಪ್ರಕರಣಗಳು ಕ್ರಮೇಣವಾಗಿ ಬೆಳೆಯುತ್ತಿವೆ. ಆದಕಾರಣ ಪ್ರಸ್ತುತವಾಗಿ ಪೋಲೀಸ್ ಇಲಾಖೆಯೂ ಮತ್ತು ಅರಣ್ಯ ಇಲಾಖೆಯೂ ಜಂಟಿ ಸಭೆ ಸೇರಿ ಈ ಕೆಳಕಂಡ ತೀರ್ಮಾನವನ್ನು 7-6-1983 ರಂದು ಪಡೆಯಿತು. ಅವುಗಳ ವಿವರ ಈ ಕೆಳಕಂಡಂತಿದೆ:

(1) ಪ್ರಸ್ತುತ ಅರಣ್ಯ ಬೀಟುಗಳನ್ನು ಮರುವಿಂಗಡಣೆ ಮಾಡಿ ಸಾಕಷ್ಟು ಅರಣ್ಯ ಪಾಲನೆಯನ್ನು ವೃದ್ಧಿಮಾಡುವುದು.

(2) ಹೆಚ್ಚಾದ ವೈರ್‌ಲೆಸ್ ಸೆಟ್ಟುಗಳನ್ನೂ, ವಾಹನಗಳನ್ನೂ ಮತ್ತು ಬಂದೂಕು ಗಳನ್ನೂ ಅರಣ್ಯ ಸಿಬ್ಬಂದಿಗಳಿಗೆ ಒದಗಿಸುವುದು.

(3) ವಿಶೇಷ ವಕೀಲರನ್ನು ಇಂತಹ ಪ್ರಕರಣಗಳಿಗೆ ಪ್ರತ್ಯೇಕವಾಗಿ ನೇಮಿಸಿಕೊಳ್ಳುವುದು.

(4) ಆನೆಗಳ ದಂತಗಳನ್ನು ಕುಶಲ ಕೈಗಾರಿಕೆಗೆ ರಿಯಾಯಿತಿ ದರದಲ್ಲಿ ಕೊಡುವುದು.

(5) (ಎ) ಅಕ್ಕಪಕ್ಕದ ರಾಜ್ಯಗಳ ಪೋಲೀಸ್ ಮತ್ತು ಅರಣ್ಯ ಅಧಿಕಾರಿಗಳನ್ನು ನಿಯತಕಾಲಿಕ ಸಭೆಗಳಿಗೆ ಆಹ್ವಾನಿಸುವುದು ಮತ್ತು ಚರ್ಚಿಸುವುದು.

(ಬಿ) ಪೋಲೀಸ್ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ತಿಂಗಳಿಗೊಂದಾವರ್ತಿ ಕರೆದು ಸಭೆಯನ್ನು ಜರುಗಿಸುವುದು.

(ಸಿ) ಪೋಲೀಸ್ ಇಲಾಖೆಯಲ್ಲಿ ಇರುವಂತಹ ವರ್ತಮಾನವನ್ನು ತಿಳಿದುಕೊಳ್ಳುವ ಪದ್ಧತಿಯನ್ನು ಅರಣ್ಯ ಇಲಾಖೆಯಲ್ಲಿ ಕೂಡಾ ಜಾರಿಗೆ ತರುವುದು.

ವಿಷಯ. ಸಿಲಿಮನೈಟ್ ಕಿಯೋನೈಟ್ ಹಾಗೂ ಇತರ ಖನಿಜಗಳ ಶೋಧನೆ ಕುರಿತು.

ಪ್ರ. 139 (159) ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ರಾಜ್ಯದಲ್ಲಿ ಭೂಗರ್ಭ ಹಾಗೂ ಗಣಿ ಇಲಾಖೆಯವರು ಎಷ್ಟು ಕಡೆಗಳಲ್ಲಿ ಹಾಗೂ ಎಲ್ಲಿ ಸಿಲಿಮನೈಟ್ ಹಾಗೂ ಕಿಯೋನೈಟ್ ಹಾಗೂ ಇತರ ಖನಿಜಗಳ ಪತ್ತೆ ಮಾಡಿದ್ದಾರೆ, ಅವುಗಳ ವಾರ್ಷಿಕ ಪ್ರಮಾಣವೆಷ್ಟು ;

(ಆ) ವರಾಹಿ ಜಲವಿದ್ಯುತ್ ಯೋಜನೆಯ ಪ್ರದೇಶದಲ್ಲಿ ಹೊಸನಗರ ಹಾಗೂ ತೀರ್ಥಹಳ್ಳಿ ತಾಲ್ಲೂಕುಗಳಲ್ಲಿಯ ಯಡೂರು ಸಮೀಪ ಮೇಲ್ಕಂಡ ಖನಿಜ ಪೇರಳವಾಗಿ ಸಿಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮೇಲ್ಕಂಡ ವರಾಹಿ ಯೋಜನೆಯ ಪ್ರದೇಶದಲ್ಲಿರುವ ಯಡೂರು ಸಮೀಪ ಹೆರ್ಗಿ ಗ್ರಾಮದ ವ್ಯಾಪ್ತಿಯಲ್ಲಿ ಮೇಲ್ಕಂಡ ಖನಿಜಗಳನ್ನು ಒಂದೆರಡು ವರ್ಷಗಳಿಂದೀಚೆಗೆ ಬೆಂಗಳೂರಿನ ಉದ್ಯಮಿಯೊಬ್ಬರು ಮದ್ರಾಸಿಗೆ ಆಕ್ರಮವಾಗಿ ಸಾಗಿಸುತ್ತಿರುವುದು ನಿಜವೇ ;

(ಈ) ಮೇಲ್ಕಂಡ ಪ್ರದೇಶದಲ್ಲಿ ಭೂವಿಜ್ಞಾನ ಮತ್ತು ಗಣಿ ಇಲಾಖೆಯಿಂದ ಟನ್ನಿಗೆ 40 ರೂಪಾಯಿ ಗೌರವಧನ ವಸೂಲಿ ಮಾಡಲಾಗುತ್ತಿದೆ ಎನ್ನುವುದು ನಿಜವೇ ;

(ಉ) ವಸೂಲಿ ಮಾಡದೆ ಇದ್ದರೆ ಈ ರೀತಿ ಅಕ್ರಮ ರಾಯಲ್ಟಿ ಮಾಡುತ್ತಿರುವುದು ಯಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ಇಲಾಖೆಯು ಸಿಲಿಮನೈಟನ್ನು ಹಾಗೂ ಕಿಯೋನೈಟ ಹಾಗೂ ಇತರ ಖನಿಜಗಳನ್ನು ಪತ್ತೆ ಮಾಡಿದೆ. ವಿವರ ಪಟ್ಟಿ 'ಅ'ರಲ್ಲಿ ಕೊಡಲಾಗಿದೆ.

(ಆ) ಹೌದು.

(ಇ) ಖಾಸಗಿ ಉದ್ಯಮಿಯೊಬ್ಬರು 12 ಟನ್ ಖನಿಜ ಆಕ್ರಮವಾಗಿ ತೆಗೆದದ್ದನ್ನು ಇಲಾಖೆಯ ಸಿಬ್ಬಂದಿ ಪತ್ತೆ ಮಾಡಿ ಖನಿಜವನ್ನು ಪಂಚನಾಮಾ ಮೂಲಕ ಸ್ಥಳೀಯ ನಿವಾಸಿ ಮಹೇಂದ್ರಪ್ಪ ಎಂಬುವರಿಗೆ ಒಪ್ಪಿಸಲಾಗಿದೆ. ಮೆ. ಮೈಸೂರು ಖನಿಜ ಸಂಸ್ಥೆಯವರಿಗೆ ಅಲ್ಲಿರುವ ಖನಿಜ ತೆಗೆದುಕೊಂಡು ಸರ್ಕಾರಕ್ಕೆ ರಾಜಧನ ಭರ್ತಿ ಮಾಡಲು ಕೇಳಿಕೊಂಡಿದೆ. ಆಕ್ರಮವಾಗಿ ಗಣಿ ಕೆಲಸ ಮಾಡಿರುವವರ ಮೇಲೆ ನೋಟೀಸು ಜಾರಿ ಮಾಡಿ ಮುಂದಿನ ಕ್ರಮವನ್ನು ಕಾನೂನಿನ ಪ್ರಕಾರ ಕೈಗೊಳ್ಳಲಾಗುತ್ತಿದೆ.

(ಈ) ಇಲ್ಲ.

(ಉ) ಇಲ್ಲ.